| |
|---|
| **Deposition Sheets (RP.No.57) Form No.4** |

**IN THE COURT OF II Addl. CIVIL JUDGE & J.M.F.C., KARKALA.**

**Criminal Case No. 44/2022**

ಪಿ.ಡಬ್ಲ್ಯು ಃ 2 ಸಿ.ಡಬ್ಲ್ಯು ಃ 2

ಸಾಕ್ಷಿದಾರನ ಹೆಸರು ಃ ರತ್ನಾಕರ
ತಂದೆಯ ಹೆಸರು ಃ ಬಾಬು
ಪ್ರಾಯ ಃ 28 ವರ್ಷ
ಉದ್ಯೋಗ ಃ ಇಲ್ಲ
ವಾಸ ಃ ಬಜಗೋಳಿ

ದಿನಾಂಕ 04.03.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಆರೋಪಿಯ ಪರಿಚಯ ಇಲ್ಲ. ಆರೋಪಿಯನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ.

ಸುಮಾರು 2 ವರ್ಷದ ಹಿಂದೆ ಬಜಗೋಳಿಯ ಕಂಬಳ ಕ್ರಾಸ್ ಎಂಬಲ್ಲಿ ರಾತ್ರಿ 8.30 ಗಂಟೆಗೆ ನಾನು ಪೇಟೆಯಿಂದ ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ ಆಗ ಆ್ಯಕ್ಟಿವ ಮೋಟಾರು ಸೈಕಲ್ ಅತೀವೇಗ ಮತ್ತು ಅಜಾಗರೂಕತೆಯಿಂದ ಬಂದು ನನಗೆ ಢಿಕ್ಕಿಪಡಿಸಿರುತ್ತದೆ. ಅಪಘಾತದಿಂದ ನನ್ನ ಕಾಲಿಗೆ, ಕಿವಿಯಲ್ಲಿ ರಕ್ತ ಬರುತ್ತಿತ್ತು. ಚಿಕಿತ್ಸೆಗಾಗಿ ಕಾರ್ಕಳ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಹೆಚ್ಚಿನ ಚಿಕಿತ್ಸೆ ಕುರಿತು ಮೂಡಬಿದ್ರೆ ಆಳ್ವಾಸ್ ಅಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತಾರೆ. ಸಾಕ್ಷಿಯು ನಿಪಿ-4 ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು** ಃ ಆರೋಪಿ ಪರ ಃ ಶ್ರೀ ಬಿ ಕೆ ವಕೀಲರಿಂದ ಃ

ಅಪಘಾತವಾಗಿದೆ ಎಂದು ಹೇಳುವ ಸ್ಥಳದಿಂದ ನನ್ನನ್ನು ಚಾಸಾ-1 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಚಾಸಾ-1 ರವರಿಗೆ ಅಪಘಾತದ ಬಗ್ಗೆ ಮಾಹಿತಿ ಇದೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯು ದ್ವಿಚಕ್ರವಾಹನವನ್ನು ಚಲಾಯಿಸಿಲ್ಲ ಎಂದರೆ ಸರಿ. ಚಾಸಾ-1 ರವರು ನನ್ನ ಬಳಿ ಪ್ರಸನ್ನ ಎಂ ಎನ್ನುವವರು ವಾಹನವನ್ನು ಚಲಾಯಿಸಿದ್ದರು ಎಂದು ಹೇಳಿರುತ್ತಾರೆ. ಈ ಪ್ರಕರಣದಲ್ಲಿ ಆರೋಪಿಯ ತಪ್ಪಿಲ್ಲ ಎಂದರೆ ಸರಿ. ನಾನು ಪೊಲೀಸ್ ಠಾಣೆಯಲ್ಲಿ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ